# ಗಂಡ

ಗಂಡನೆಂದರೆ ಬಲಾಢ್ಯನೂ ಶೂರನೂ ಶಕ್ತಿ ಸಂಪನ್ಮೂಲವುಳ್ಳವನೂ ಆದ ವ್ಯಕ್ತಿಯೆಂಬ ಅರ್ಥವಿದೆ. ಕಾಲಾಂತರದಲ್ಲಿ ಇದಕ್ಕೆ ಒಡೆಯ, ಯಜಮಾನ ಎಂಬ ಅರ್ಥಗಳು ಸೇರಿಕೊಂಡಿವೆ. ಅಂದರೆ ಗಂಡನೆಂಬ ಶಬ್ದಕ್ಕೆ ಲಿಂಗಾಧಾರಿತ ಅರ್ಥವನ್ನೂ ಇಟ್ಟು ನೋಡಿದರೆ ಇಲ್ಲಿ ಒಳಿತು ಅನ್ನಿಸುತ್ತದೆ. ಬಲಾಢ್ಯಳೂ ಶೂರಳೂ ಶಕ್ತಿ ಸಂಪನ್ಮೂಲಳೂ ಆಗಿರುವ ಸ್ತ್ರೀಯೂ ಕೂಡ ಗಂಡುತನವನ್ನು ಉಳ್ಳವಳಾಗಿರುವ ಸಾಧ್ಯತೆಯಿದೆ. ಚರಿತ್ರೆಯಲ್ಲಿ ಪುರುಷನಂತೆ ಅಥವಾ ಅವನಿಗಿಂತ ಮಿಗಿಲಾಗಿ ಗಂಡುತನವನ್ನು ಮೆರೆದ ಅನೇಕ ಸ್ತ್ರೀಯರು ನಮಗೆ ಸಿಗುತ್ತಾರೆ. ಆದರೆ ಪುರುಷ ಪ್ರಧಾನ ವ್ಯವಸ್ಥೆ ಪ್ರಾರಂಭವಾದ ನಂತರ ಗಂಡುತನಕ್ಕಿರುವ ಗುಣಲಕ್ಷಣಗಳು ಪುರುಷನಲ್ಲಿ ಮಾತ್ರ ಗೋಚರಿಸುತ್ತವೆ ಅಥವಾ ಇವೆ ಎಂದು ಭ್ರಮಿಸಿ ಗಂಡುತನವನ್ನು ಪುರುಷನಿಗೆ ಅನ್ವಯಿಸಿ ಸೀಮಿತಗೊಳಿಸಲಾಗಿದೆ. ಗಂಡನೆಂಬ ಪದವನ್ನು ಪುರುಷನಿಗೇ ಅನ್ವಯಿಸಿ ಸೀಮಿತಗೊಳಿಸಲಾಗಿದೆ.

ಗಂಡ ಎಂಬ ಶಬ್ದಕ್ಕೆ ಇನ್ನೂ ಇಂದು ಅರ್ಥವಿದೆ. ಏನು ಗಂಡ ಕಾದಿದೆಯೋ? ಎಂಬ ಮಾತಿನಲ್ಲಿ ಅಪಾಯ, ತೊಂದರೆಗಳ ನಿರೀಕ್ಷೆಯ ದಿಗಿಲು ಕಾಣುತ್ತದೆ. ಅಂದರೆ ಗಂಡನೆಂದರೆ ಅಪಾಯ, ಆಪತ್ತು, ಕುರು, ರೋಗ ರುಜಿನ ಎಂಬೆಲ್ಲಾ ಅರ್ಥಗಳಿವೆಯೆಂಬುದನ್ನು ತಿಳಿದುಕೊಂಡು, ಗಂಡ ಎಂಬ ಪದಕ್ಕೆ ಈಗ ಜನಪ್ರಿಯವಾಗಿ ಬಳಸುತ್ತಿರುವ ಪತಿ ಅಥವಾ ಹಸ್ಬೆಂಡ್ ಎಂಬ ಪದವನ್ನು ವ್ಯಾಖ್ಯಾನಿಸಬಹುದು. ಸ್ತ್ರೀಯನ್ನು ಪತ್ನಿಯನ್ನಾಗಿ ಸ್ವೀಕರಿಸಿ, ಅವಳನ್ನು ಸಂತಾನಾಭಿವೃದ್ಧಿಯ ಸಾಧನ ಮತ್ತು ಭೋಗಬಾಜನಳನ್ನಾಗಿ ಮಾಡಿಕೊಂಡ ಪುರುಷ, ಅವಳನ್ನು ವ್ಯಕ್ತಿತ್ವ ರಹಿತಳನ್ನಾಗಿ ಮಾಡಿ, ಅವಳ ಆಸೆ ಕನಸು ಮತ್ತು ಸೃಷ್ಟಿಶೀಲ ನಡೆಯನ್ನು ಕುಂಠಿತಗೊಳಿಸಿ ಗುಲಾಮಳನ್ನಾಗಿಸಿಕೊಂಡನು. ಇದು ಜಗತ್ತಿನ ಎಲ್ಲೆಡೆ ಚರಿತ್ರೆಯಲ್ಲಿ ಕಂಡು ಬರುವ ಸತ್ಯ. ಚರಿತ್ರೆಯಲ್ಲಿ ಪುರುಷ ನಿರಂತರವಾಗಿ ಸ್ತ್ರೀಯ ಮೇಲೆ ನಡೆಸುತ್ತ ಬಂದಿರುವ ಶೋಷಣೆಯ ಹಿನ್ನೆಲೆಯಲ್ಲಿ– ಸ್ತ್ರೀ ದೃಷ್ಟಿಯಿಂದ ನೋಡಿದಾಗ ಸ್ತ್ರೀಪಾಲನಿಗೆ ಗಂಡ ಅಪಾಯ, ಆಪತ್ತು ಅಥವಾ ದೇಹಕ್ಕೆ ಅಂಟಿಕೊಂಡ ಕುರುವೆಂದೇ ತಿಳಿಯಬೇಕು. ಈ ಕಾರಣದಿಂದ ಸ್ತ್ರೀಗೆ ಪತಿಯೆಂದರೆ ಒಂದರ್ಥದಲ್ಲಿ ಗಂಡ>ಅಪಾಯ, ಆಪತ್ತು– ಎಂದೇ ಬಗೆಯಬೇಕು.

ಆಧುನಿಕ ಕಾಲದಲ್ಲಿ ಸ್ತ್ರೀಪ್ರಪಂಚದ ವಿಕಸನಕ್ಕೆ ಮನೆ, ಶಾಲೆ, ಕಚೇರಿಗಳಲ್ಲಿ ಹೆಜ್ಜೆ ಹೆಜ್ಜೆಗೂ ನಾನಾ ಮಾನಸಿಕ, ದೈಹಿಕ ಮತ್ತು ಆರ್ಥಿಕ ಗಂಡಾಂತರಗಳನ್ನು ತಂದೊಡ್ಡುವ ತಡೆಗೋಡೆಯಾಗಿ ಪುರುಷ ವ್ಯವಹರಿಸುತ್ತಿದ್ದಾನೆ ಎಂಬ ಸತ್ಯವನ್ನು ಅರ್ಥಮಾಡಿಕೊಂಡಾಗ ಗಂಡ ಎಂಬ ಶಬ್ದಕ್ಕಿರುವ ಅರ್ಥ ವೈಶಾಲ್ಯತೆ ಅರಿವಿಗೆ ಬರುತ್ತದೆ. ಗಂಡ ಎಂಬ ಪದಕ್ಕೆ ಇಂಗ್ಲಿಷ್ ಶಬ್ದಕೋಶವೊಂದು ಎರಡು ಭಿನ್ನವಾದ, ವಿರುದ್ಧಾರ್ಥ ನೀಡುತ್ತದೆ. ಗಂಡ> ಸಮರ್ಥ ನಿರ್ವಾಹಕ ಮತ್ತು ಗಂಡ> ಅಸಮರ್ಥ ನಿರ್ವಾಹಕ– ಎಂಬ ಎರಡು ಅರ್ಥಗಳೇ ಅವು. ಈ ನೆಲೆಯಲ್ಲೂ ನಾವು ಸ್ತ್ರೀಪುರುಷ ಸಾಮರ್ಥ್ಯವನ್ನು ಕುರಿತು ಚಿಂತಿಸಬಹುದು. ಆಧುನಿಕ ಸಮಾಜಶಾಸ್ತ್ರಜ್ಞರು ಮತ್ತು ವ್ಯವಹಾರ ನಿರ್ವಹಣಾ ಶಾಸ್ತ್ರಜ್ಞರು ಗುರುತಿಸಿರುವಂತೆ ಪುರುಷರಿಗಿಂತ ಸ್ತ್ರೀಯರು ಉತ್ತಮ ನಿರ್ವಹಣಾ ಕೌಶಲ್ಯವನ್ನುಳ್ಳವರು. ಅತ್ಯಂತ ಉತ್ತಮ ನಿರ್ವಹಣಾ ಶಕ್ತಿಯಿರುವ ಪುರುಷರಿಗಿಂತ ಅತ್ಯಂತ ಕಳಪೆ ನಿರ್ವಹಣಾ ಶಕ್ತಿಯಿರುವ ಪುರುಷರು ಅಧಿಕ. ಆದರೆ ಸಾಧಾರಣ ಮಟ್ಟದಿಂದ ಅತ್ಯುತ್ತಮ ನಿರ್ವಹಣಾ ಸಾಮರ್ಥ್ಯವಿರುವ ಮಹಿಳೆಯರು ಜಗತ್ತಿನ ಮನೆ ಮನೆಯಲ್ಲೂ ಸಿಗುತ್ತಾರೆ. ಏಕೆಂದರೆ ಸ್ತ್ರೀಗೆ ನಿರ್ವಹಣೆ ಎಂಬುದು ಕೌಟುಂಬಿಕ ಕಾರಣಗಳಿಂದಾಗಿ ಅವಳಲ್ಲಿ ವಂಶವಾಹಿ ರೂಪದಲ್ಲೇ ತರಬೇತಿ ಪಡೆದುದಾಗಿರುತ್ತದೆ.

ಸ್ತ್ರೀಯ ಈ ಬಗೆಯ ನಿರ್ವಹಣಾ ಸಾಮರ್ಥ್ಯ– ಕೌಶಲ್ಯಕ್ಕೆ ಒಂದು ರೂಪದಲ್ಲಿ ಪುರುಷನೇ ಕಾರಣನೆನ್ನಬಹುದು. ಹೆಂಡತಿ ಎನ್ನುವವಳು ದ್ವಿತೀಯೆ ಎಂದು ಪರಿಗಣಿಸಿ, ಅವಳು ನಿರ್ದಿಷ್ಟ ಕೆಲಸದಲ್ಲಿ ತೊಡಗಿರುವವಳು ಎಂದು ಒಂದು ಜಾಗಕ್ಕೆ ಅಥವಾ ಕೆಲಸಕ್ಕೆ ಕಟ್ಟಿಹಾಕಿರುವುದು ಕೂಡ ಕಾರಣವಾಗಿದೆ. ಅವಳನ್ನು ಒಂದು ನಿರ್ದಿಷ್ಟ ಕೆಲಸಕ್ಕೆ, ಅದರಲ್ಲೂ ಮುಖ್ಯವಾಗಿ ಗೃಹಕೃತ್ಯಕ್ಕೆ ಸೀಮಿತಗೊಳಿಸಿ ಬಂಧಿಸಿದ್ದರಿಂದ ಅವಳು ಅನಿವಾರ್ಯವಾಗಿ ಅದರ ನಿರ್ವಹಣೆಯಲ್ಲಿ ಕೌಶಲ್ಯವನ್ನು ವೃದ್ಧಿಸಿಕೊಂಡಳು. ಮಕ್ಕಳು ಮರಿ, ತೋಟ ತುಡಿಗೆ, ಮನೆಯ ಉಸ್ತುವಾರಿ ಮತ್ತು ಆರ್ಥಿಕ ನಿರ್ವಹಣೆಗಳು ಅವಳ ಕುಶಲತೆಯ ಕಾರಣದಿಂದಾಗಿ ಸರಿದೂಗುತ್ತಿದ್ದವು.

ಪ್ರಕೃತಿ ನಿಯಮದಲ್ಲಿ ಸ್ತ್ರೀಪುರುಷರಿಬ್ಬರೂ ಸಮಾನರು. ಸೃಷ್ಟಿಯ ಮತ್ತು ಅದರ ಚಲನೆಯಲ್ಲಿ ಅವರ ಪಾಲು ಪರಸ್ಪರ ಪೂರಕ. ಗಂಡ ಹೆಂಡತಿ ಎಂಬ ಪರಿಕಲ್ಪನೆಗಳು ಅನಂತರ ಸೃಷ್ಟಿಗೊಂಡ ಅಸಮಾನ ಸಾಮಾಜಿಕ ಪದ್ಧತಿಗಳು.

■ **ಶಿಕಾಕು**

## ಮಾತೇ ಮುತ್ತು

★ ಯೌವನವನ್ನು ಸದ್ಬಳಕೆ ಮಾಡಿಕೊಂಡವನು ಇಳಿವಯಸ್ಸಿನಲ್ಲಿ ಸಹನೀಯ ಬದುಕು ಕಾಣುತ್ತಾನೆ.

–ಲಿಡಿಯಾ ಚೈಲ್ಡ್

★ ಮನುಷ್ಯನಾಗುವುದು ಸುಲಭ; ಮಾನವೀಯವಾಗಿ ಇರುವುದು ಕಷ್ಟ.

–ಮಿರ್ಜಾ ಘಾಲಿಬ್

★ ಕುಡುಕನ ಜೀವನ, ಕನಸಿನ ಸಾವು.

–ಜಪಾನಿ ಗಾದೆ

★ ಧರ್ಮಾಸನ ಹೊರಳುತಿವೆ, ಸಿಂಹಾಸನ ಉರುಳುತಿವೆ/ ಜಾತಿ ಪಂಥ ತೆರಳುತಿವೆ, ಮನದ ಮರೆಯಲಿ.

–ದ.ರಾ. ಬೇಂದ್ರೆ

★ ಮನ ಸುದ್ದವಿಲ್ಲದವರಿಗೆ ದ್ರವ್ಯದ ಬಡತನವಲ್ಲದೆ, ಚಿತ್ತಶುದ್ಧದಲಿ ಕಾಯಕವ ಮಾಡುವಲ್ಲಿ, ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮೀ ತಾನಾಗಿಪ್ಪಳು.

–ಆಯ್ದಕ್ಕಿ ಲಕ್ಕಮ್ಮ

★ ಮಗುವಿಗೆ ಒಂದು ವಸ್ತು ಅಥವಾ ವಿಷಯದ ಬಗ್ಗೆ ಆಸಕ್ತಿ ಇಲ್ಲವೆಂದಾದಲ್ಲಿ, ನೀವು ಅದರ ಬಗ್ಗೆ ಎಷ್ಟು ಕೂಗಾಡಿದರೂ ಪ್ರಯೋಜನವಿಲ್ಲ. ಮಗುವಿನ ಮೇಲೆ ಒತ್ತಡ ಹೇರಬೇಡಿ.

–ಜಾನ್ ಹಾಲ್ಟ್

★ ಮಹಿಳೆಯರು ಇಲ್ಲವಾಗಿದ್ದಲ್ಲಿ ಜಗತ್ತಿನಲ್ಲಿರುವ ಹಣಕ್ಕೆ ಅರ್ಥವೇ ಇರುತ್ತಿರಲಿಲ್ಲ.

–ಅರಿಸ್ಟಾಟಲ್

★ ಮಗು ಕೆಳಗಿನಿಂದ ತಲೆ ಎತ್ತಿ ಹಿರಿಯರನ್ನು ನೋಡುತ್ತದೆ. ಆಗ ನಮ್ಮ ಕುರೂಪ ಕಾಣಿಸದಂತೆ ಎಚ್ಚರ ವಹಿಸಬೇಕು.

–ಜಾರ್ಜ್ ಆರ್ವೆಲ್

★ ಕಷ್ಟಗಳು ಇರುವುದೇ ನಮ್ಮನ್ನು ಗಟ್ಟಿಗೊಳಿಸಲು; ನಿರುತ್ಸಾಹಿಸಲು ಅಲ್ಲ. ಸಂಘರ್ಷದಿಂದಲೇ ಮನುಷ್ಯ ಚೇತನ ಇನ್ನಷ್ಟು ಗಟ್ಟಿಯಾಗುತ್ತದೆ.

–ವಿಲಿಯಂ ಚಾನಿಂಗ್

★ ಮಗುವಿನ ನಗುವನ್ನು ಸಹಿಸದವನ ಬಗ್ಗೆ ಎಚ್ಚರದಿಂದಿರಿ.

–ಜೊಹಾನ್ ಲ್ಯಾವೇಟರ್

★ ಸದೃಢ, ಆರೋಗ್ಯವಂತ ಕಾಲುಗಳಿದ್ದೂ ನಡೆಯಲು ಕಲಿಯದವನನ್ನು ಸಂಪ್ರದಾಯವಾದಿ ಎನ್ನುತ್ತಾರೆ.

–ಫ್ರಾಂಕ್ಲಿನ್ ರೂಸ್‌ವೆಲ್ಟ್

★ ಶಿಕ್ಷೆಯ ಭಯದಿಂದ ಅಥವಾ ಬಹುಮಾನದ ಆಸೆಯಿಂದ ಮನುಷ್ಯ ಒಳ್ಳೆಯವನು ಅನ್ನಿಸಿಕೊಂಡರೆ ಅದಕ್ಕಿಂತ ವಿಷಾದದ ಸಂಗತಿ ಇನ್ನೊಂದಿಲ್ಲ.

–ಆಲ್ಬರ್ಟ್ ಐನ್‌ಸ್ಟೀನ್

★ ಶ್ರೇಷ್ಠ ಕೆಲಸಗಳನ್ನು ಮಾಡಲು ಬೇಕಾದ ಮೊದಲ ಆವಶ್ಯಕತೆ ಆತ್ಮವಿಶ್ವಾಸ.

–ಸ್ಯಾಮುವೆಲ್ ಜಾನ್ಸನ್

★ ಎಷ್ಟು ಕಷ್ಟವೋ ಹೊಂದಿಕೆ ಎಂಬುದು ನಾಲ್ಕು ದಿನದ ಈ ಬದುಕಿನಲಿ!

–ಜಿಎಸ್‌ಎಸ್